ಕೆಳಜಾತಿ ಜನರ ಬಗ್ಗೆಯಷ್ಟೇ ಕಾಳಜಿ ವಹಿಸುತ್ತಾರೆ. ಆದರೆ ಸ್ತ್ರೀವಾದವು ಹಿಂದುಳಿದವರ, ನೊಂದವರ, ಶೋಷಿತರ, ದಲಿತರ, ತೃತೀಯಲಿಂಗಗಳ, ಅಲ್ಪಸಂಖ್ಯಾತರ, ಹೀಗೆ ಎಲ್ಲರನ್ನೂ ಒಳಗೊಂಡ ಸಮಸಮಾಜದ ಕಟ್ಟುವಿಕೆಗೆ ಸದಾ ತುಡಿಯುತ್ತದೆ, ಹೀಗಾಗಿ ನಾವೆಲ್ಲರೂ ಸ್ತ್ರೀವಾದಿಗಳಾಗಬೇಕಿದೆ.

◆ **ಮೂರು ದಶಕಗಳ ಹಿಂದೆ ನೀವು ಬರೆದ 'ಅಯೋನಿ' ಎಂಬ ಕತೆಯೊಂದನ್ನು ಓದಿದೆ. ಅಮಾಯಕ ಬಾಲಕಿಯೊಬ್ಬಳು ವೇಶ್ಯಾವಾಟಿಕೆಯಲ್ಲಿ ಸಿಕ್ಕಿಬಿದ್ದ, ಆತ್ಮನಿವೇದನೆಯ ನಿರೂಪಣಾ ಶೈಲಿಯಿರುವ ಆ ಕತೆಯ ಹಸಿ ಹಸಿ ವಿವರಗಳ ದಾರುಣ ಚಿತ್ರಣ ಅಂತಃಕರಣ ಕಲಕುವಂತಿದೆ. ಹೆಣ್ಣಿನ ಮೇಲೆ ಇಂದಿಗೂ ನಿಲ್ಲದ ಅತ್ಯಾಚಾರಗಳ ಬಗ್ಗೆ ನೀವೇನು ಹೇಳುತ್ತೀರಿ?**

ಪಿತೃ ಸಂಸ್ಕೃತಿಯು ಹೆಣ್ಣನ್ನು ಶೋಷಿಸುವ ಹಿಂಸಿಸುವ ಅಸ್ತ್ರವಾಗಿ ಅನಾದಿ ಕಾಲದಿಂದಲೂ ಸಮಾಜದಲ್ಲಿ ಬಳಕೆಯಾಗುತ್ತಾ ಬಂದಿದೆ. ಪ್ರಪಂಚದ ಎಲ್ಲ ಮಹಿಳೆಯರೂ ಶಿಕ್ಷಿತ, ಅಶಿಕ್ಷಿತ, ಮೇಲ್ವರ್ಗದ, ಹಿಂದುಳಿದ ಎಂಬ ಭೇದಗಳಾಚೆಯೂ ಸದಾ ಯಾವುದೋ ಒಂದು ಭಯವನ್ನು ಬಸಿರಲ್ಲಿ ಹೊತ್ತುಕೊಂಡೇ ಬದುಕುತ್ತಿದ್ದಾರೆ. ಈ ವಿಷಮ ವ್ಯವಸ್ಥೆಯಲ್ಲಿ ತಮಗೆ ರಕ್ಷಣೆಯಿಲ್ಲವೆಂಬ ಭಯ ಕ್ಷಣಕ್ಷಣವೂ ಅವರನ್ನು ಹಿಂಸಿಸುತ್ತಿದೆ. ಆ ಭಯವನ್ನೇ ನಮ್ಮ ಪಿತೃ ಸಂಸ್ಕೃತಿಯು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ. ಹೀಗಾಗಿ ನಾವೆಲ್ಲಾ ಕೈಜೋಡಿಸಬೇಕು ಮತ್ತು ಆ ನೆಲೆಯಲ್ಲಿ ಹೋರಾಡುವವರೆಗೂ ಈ ಹಿಂಸೆಗೆ ಕೊನೆಯಿಲ್ಲ.

◆ **ಓಲ್ಗಾ ಎಂಬ ಹೆಸರಿನ ಹಿಂದಿರುವ ವಾತ್ಸಲ್ಯದ ಕತೆಯೊಂದನ್ನು ಹೇಳುವಿರಾ?**

ಓಲ್ಗಾ ಎಂಬುದು ನನಗಿಂತಲೂ ನಾಲ್ಕು ವರ್ಷ ಹಿರಿಯಳಾದ ನಮ್ಮ ಅಕ್ಕನ ಹೆಸರು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಓಲ್ಗಾ

◆ **'ಜೈಲುಗದಿ ಆತ್ಮಕಥ' ಎಂಬ ಮೊದಲ ಕತೆಯಿಂದ ನೀವು ಇಷ್ಟು ಎತ್ತರಕ್ಕೆ ಬೆಳೆದಿದ್ದೀರಿ. ಈಗ ಹಿಂತಿರುಗಿ ನೋಡಿದರೆ ನಿಮ್ಮ ಪಯಣ ಖುಷಿಕೊಡುತ್ತಿದೆಯೇ?**

ಒಬ್ಬ ಲೇಖಕಿಯಾಗಿ ಈ ಪಯಣವು ನನಗೆ ತುಂಬಾ ಖುಷಿಯನ್ನೇ ನೀಡಿದೆ. ಏಕೆಂದರೆ ನಾನೇನು ಬರೆಯಬೇಕೆಂದು ತುಡಿಯುತ್ತಿದ್ದೆನೋ ಅದನ್ನೇ ಬರೆದಿದ್ದೇನೆ. ಇತ್ತೀಚೆಗೆ ಕೆಲವು ಲೇಖಕರು ತಾವು ಹಿಂದೆ ಬರೆದ ಕೃತಿಗಳ ಬಗ್ಗೆ ಅಸ್ವಾಮ್ಯತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. 'ಈ ಕೃತಿಯನ್ನು ನಾನು ಬರೆಯಬಾರದಾಗಿತ್ತು' ಎನ್ನುತ್ತಿದ್ದಾರೆ. ಆದರೆ ನನ್ನ ಮೊದಲ ಕವಿತೆ, ಕತೆಯಿಂದ ಹಿಡಿದು ನನ್ನೆಲ್ಲಾ ಬರಹಗಳನ್ನೂ ನಾನು ಇಂದಿಗೂ ಹೆಮ್ಮೆಯಿಂದ ಗೌರವಿಸುತ್ತೇನೆ. ನನ್ನ ಬರಹಗಳಿಗೆ ನಾನು ಬದ್ಧಳಾಗಿದ್ದೇನೆ. ನಾನಿನ್ನೂ ಬರೆಯಬೇಕಿದ್ದ ಕೆಲವು ಕೃತಿಗಳು ಇನ್ನೂ ಮುಗಿದಿಲ್ಲ ಎಂಬ ಸಂಗತಿಯನ್ನು ಹೊರತುಪಡಿಸಿ ನನ್ನಲ್ಲಿ ಯಾವ ಅತೃಪ್ತಿಯೂ ಉಳಿದಿಲ್ಲ.



ಸಂಗಾತಿ ಕುಟುಂಬರಾವ್ ಅವರೊಂದಿಗೆ ಓಲ್ಗಾ